ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಸೋಮವಾರ ಹನ್ನೆರಡನೇ ಆಗಸ್ಟ್ 1996ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ **ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬಳ್ಳಾರಿಯಲ್ಲಿ ಕ್ರೀಡಾಂಗಣಕ್ಕಾಗಿ ಮೀಸಲಿಟ್ಟಿರುವ ಜಮೀನು

2407 - ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿಯಲ್ಲಿರುವ ಕ್ರೀಡಾಂಗಣಕ್ಕೆ ಎಷ್ಟು ಜಾಗ ನಿಗದಿ ಪಡಿಸಲಾಗಿದೆ?

ಆ) ಕ್ರೀಡಾಂಗಣ ಸಮಿತಿಯ ರಚನೆಯಲ್ಲಿ ವಿಳಂಬವಾಗಿದೆಯೆ?

ಇ) ಹಾಗಿದ್ದಲ್ಲಿ, ಈ ವಿಳಂಬಕ್ಕೆ ಕಾರಣವೇನು?

ಈ) ಬಳ್ಳಾರಿ ನಗರದಲ್ಲಿ ಈಜುಕೊಳವನ್ನು ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆಯೆ?

ಉ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚ ಮತ್ತು ಯಾವಾಗ ಇದರ ನಿರ್ಮಾಣ ಕಾರ್ಯ ಆರಂಭವಾಗಿ ಎಂದು ಮುಕ್ತಾಯಗೊಳ್ಳುವುದು.

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಮತ್ತು ಕ್ರೀಡಾ ಸಚಿವರು):

ಅ) 7.16 ಎಕರೆ

ಆ) ಇಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಶ್ರೀ ಎಂ. ದಿವಾಕರ್ ಬಾಬು : ಅಧ್ಯಕ್ಷರೆ, ಕ್ರೀಡಾಂಗಣ ಸಮಿತಿಯ ರಚನೆಯಲ್ಲಿ ವಿಳಂಬವಾಗಿದೆಯೇ? ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಕ್ರೀಡಾಂಗಣ ಸಮಿತಿ ಏನಾದರೂ ಇದೆಯೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಯುವಜನ ಮತ್ತು ಕ್ರೀಡಾ ಸಚಿವರ ಪರವಾಗಿ): ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕ್ರೀಡಾಂಗಣ ಸಮಿತಿಯನ್ನು ರಚನೆ

ಮಾಡಲಾಗಿದೆ. ಅದರಲ್ಲಿ, ಸೂಪರಿಂಟೆಂಡೆಂಟ್ ಆಫ್ ಪೋಲಿಸ್, ಟೌನ್ ಮುನಿಸಿಪಲ್ ಅಧ್ಯಕ್ಷರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಕಾರ್ಯನಿರ್ವಾಹಕ ಅಭಿಯಂತರು ಮತ್ತು ಇಬ್ಬರು ಸ್ಥಳೀಯ ಸದಸ್ಯರು ಇರುತ್ತಾರೆ.

ವಿರಾಜಪೇಟೆ ತಾಲ್ಲೂಕಿನ ಸೇತುವೆಗಳ ದುಸ್ಥಿತಿ

2487 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಟಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಎಲ್ಲಾ ಸೇತುವೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಾಲಿನಲ್ಲಿ ಎಷ್ಟು ಸೇತುವೆಗಳನ್ನು ಪುನರ್ ನಿರ್ಮಿಸಲು ಸರ್ಕಾರದವರು ಆದೇಶ ಹೊರಡಿಸಿರುವರು ಹಾಗೂ ಇವುಗಳಿಗೆ ಮೀಸಲಿಟ್ಟ ಹಣವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿರುವ 49 ಸೇತುವೆಗಳ ಪೈಕಿ 30 ಸೇತುವೆಗಳು ಹಳೆಯದಾಗಿದ್ದರೂ ವಾಹನ ಸಂಚಾರಕ್ಕೆ ಯೋಗ್ಯವಾಗಿವೆ. ಇವುಗಳು ಹಳೆಯದಾಗಿರುವುದರಿಂದ ಹಾಗೂ ಕಿರಿದಾಗಿರುವುದರಿಂದ ಸುಧಾರಣೆ ಸಾಧ್ಯವಿಲ್ಲದಿದ್ದು ಪುನರ್ ನಿರ್ಮಾಣ ಮಾಡಬೇಕಿದೆ.

ಆ) ಈ ಸಾಲಿನಲ್ಲಿ ಯಾವುದೇ ಸೇತುವೆಯ ಪುನರ್ ನಿರ್ಮಾಣಕ್ಕೆ ಪ್ರಸ್ತಾವನೆ ಇರುವುದಿಲ್ಲ. ಹಾಗೂ ಹಣವನ್ನು ಮೀಸಲಿಟ್ಟಿರುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ಎಲ್ಲಾ ಸೇತುವೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದೇನೆ. ಉತ್ತರದಲ್ಲಿ, ವಿರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿರುವ 49 ಸೇತುವೆಗಳ ಪೈಕಿ 30 ಸೇತುವೆಗಳು ಹಳೆಯದಾಗಿದ್ದರೂ ವಾಹನ ಸಂಚಾರಕ್ಕೆ ಯೋಗ್ಯವಾಗಿವೆ ಎಂದು ಹೇಳಿದ್ದಾರೆ. ಅವುಗಳಲ್ಲಿ ಮೂವತ್ತು ಸೇತುವೆಗಳ ದುಸ್ಥಿತಿ ಹೇಗಿದೆ ಎಂದು ವರ್ಣಿಸುವುದಕ್ಕೆ ನನ್ನಿಂದ ಸಾಧ್ಯವಾಗುತ್ತಿಲ್ಲ. ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ, ಈಗಾಗಲೇ ರಾಜ್ಯ ಹೆದ್ದಾರಿಯಲ್ಲಿರುವ ಒಂದು ಸೇತುವೆ ಕುಸಿದು ಹೋಗಿ ನಾಲ್ಕು ದಿವಸಗಳಾಯಿತು, ಸರ್ಕಾರ ಇದರ ಬಗ್ಗೆ ಗಮನಹರಿಸಿದೆಯೇ? ಇದು ನನ್ನ ಮೊದಲ ಉಪ ಪ್ರಶ್ನೆಯಾಗಿದೆ. ಇದಕ್ಕೆ ದಯವಿಟ್ಟು ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ, ಈ ಸಾಲಿನಲ್ಲಿ ಎಷ್ಟು ಸೇತುವೆಗಳನ್ನು ಪುನರ್ ನಿರ್ಮಿಸಲು ಸರ್ಕಾರದವರು ಆದೇಶ ಹೊರಡಿಸಿರುವರು ಹಾಗೂ ಇವುಗಳಿಗೆ ಮೀಸಲಿಟ್ಟ ಹಣವೆಷ್ಟು ಎಂದು ಕೇಳಿದ್ದೇನೆ ಅದಕ್ಕೆ, ಈ ಸಾಲಿನಲ್ಲಿ ಯಾವುದೇ ಸೇತುವೆಯ ಪುನರ್ ನಿರ್ಮಾಣಕ್ಕೆ ಪ್ರಸ್ತಾವನೆ ಇರುವುದಿಲ್ಲ ಹಾಗೂ ಹಣವನ್ನು ಮೀಸಲಿಟ್ಟಿರುವುದಿಲ್ಲವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಮೂವತ್ತು ಸೇತುವೆಗಳು ಹಳೆಯದಾಗಿವೆ ಎನ್ನುವುದನ್ನು ಸರ್ಕಾರ ಒಪ್ಪಿಕೊಂಡಿದೆ. ನಾಲ್ಕು ದಿವಸಗಳ ಹಿಂದೆ ರಾಜ್ಯ ಹೆದ್ದಾರಿಯಲ್ಲಿ ಒಂದು ಸೇತುವೆ ಕುಸಿದು ಹೋಗಿರುವುದರಿಂದ ಇವತ್ತು ಬಹಳ ದುಸ್ಥಿತಿಯಲ್ಲಿ ಅಲ್ಲಿ ಪ್ರಯಾಣ ಮಾಡುತ್ತಿದ್ದೇವೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಆ ಮೂವತ್ತು ಸೇತುವೆಗಳಲ್ಲಿ ಒಂದಕ್ಕೂ ಇವರು ಪ್ರಾವಿಷನ್